# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **2581** |
| ಉತ್ತರಿಸಬೇಕಾದ ದಿನಾಂಕ | : | 24.03.2022 (ನಗರಾಭಿವೃದ್ಧಿ ಇಲಾಖೆ ವರ್ಗಾವಣೆಗೊಂಡ ಪ್ರಶ್ನೆ) |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಯಡಿಯೂರು, ಶಾಸ್ತ್ರಿ ನಗರ, ಜಯನಗರ 7 ನೇ ಬ್ಲಾಕ್‌ನಲ್ಲಿರುವ ಅಂಬೇಡ್ಕರ್ ಕಾಲೋನಿಯ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಜನಗಳಿಗೆ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳಲು ಸರ್ಕಾರ 1 ಎಕರೆ 15 ಗುಂಟೆ ಜಮೀನನ್ನು ಸರ್ಕಾರದ ಗೆಜೆಟ್ ನೋಟಿಫಿಕೇಶನ್ ಮುಖಾಂತರ ಆದೇಶ ಮಾಡಿ ಬಡವರಿಗೆ ಕೇವಲ 33 ಗುಂಟೆ ಜಾಗವನ್ನು ಮಾತ್ರ ನೀಡಿ, ಉಳಿದ ಜಾಗವನ್ನು ಶ್ರೀಮಂತರ ಹಾಗೂ ಭೂಗಳ್ಳರ ಪಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಬೆಂಗಳೂರು ನಗರ ಜಿಲ್ಲೆಯ ಯಡಿಯೂರು ಗ್ರಾಮದ ಸರ್ವೆ ನಂ.53/2 ರಲ್ಲಿ 0-18 ಎ/ಗುಂ ಮತ್ತು ಸರ್ವೆ ನಂ.53/2 ರಲ್ಲಿ 1-30 ಎ/ಗುಂ ಒಟ್ಟಾರೆ 2-08 ಜಮೀನಿನಲ್ಲಿರುವ ಶಾಸ್ತ್ರೀನಗರ ಕೊಳಚೆ ಪ್ರದೇಶವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: HMA/41/MCS/76 ದಿನಾಂಕ:28-03-1977 ರಂದು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯಿದೆ 1973 ರ ಕಲಂ-3 ರಡಿ ಕೊಳಚೆ ಪ್ರದೇಶವೆಂದು ಘೋಷಣೆ ಮಾಡಲಾಗಿದೆ.<br><br>ಮೇಲ್ಕಂಡ ಅಧಿಸೂಚಿತ ಪ್ರದೇಶದ ಒಟ್ಟಾರೆ 2-08 ಎಕರೆ/ಗುಂಟೆ ಪೈಕಿ ಖಾಲಿ ಜಾಗವನ್ನು ಹೊರತುಪಡಿಸಿ, ಸರ್ವೆ ನಂ.53/3 ರಲ್ಲಿ 0-33 ½ ಎಕರೆ/ಗುಂಟೆ ಜಮೀನಿನಲ್ಲಿ ಕೊಳಚೆ ಪ್ರದೇಶವಿದ್ದುದರಿಂದ ಅಲ್ಲಿನ ನಿವಾಸಿಗಳ ಗುಡಿಸಲುಗಳನ್ನು ತೆರವುಗೊಳಿಸುವ ಸಲುವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ:HUD/84/MCS/77, ದಿನಾಂಕ:23-02-1978 ರಂದು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯಿದೆ 1973 ರ ಕಲಂ-11 ರಡಿ ಅಂತಿಮವಾಗಿ ಕೊಳಚೆ ಪ್ರದೇಶವೆಂದು ಘೋಷಣೆ ಮಾಡಲಾಗಿರುತ್ತದೆ.<br><br>ಸರ್ಕಾರದಿಂದ ಘೋಷಣೆಯಾದ 0-33 ½ ಎಕರೆ/ಗುಂಟೆ ಕೊಳಚೆ ಪ್ರದೇಶವನ್ನು ಪುನರಾಭಿವೃದ್ಧಿ ಮಾಡುವ ಉದ್ದೇಶದಿಂದ ಮತ್ತು ಕೊಳಗೇರಿ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ಉದ್ದೇಶಕ್ಕಾಗಿ, ಘೋಷಿತ ಕೊಳಚೆ ಪ್ರದೇಶದೊಳಗೆ ಒಳಗೊಂಡಿರುವ ಭೂಮಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:HUD 165 MCS 79, ದಿನಾಂಕ:05.09.1989 ರಲ್ಲಿ ಕರ್ನಾಟಕ ಕೊಳಗೇರಿ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯಿದೆ 1973 ರ ಕಲಂ-17 ರಡಿ ಅಂತಿಮವಾಗಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ. ಭೂಸ್ವಾಧೀನವಾದ 0-33 ½ ಎಕರೆ/ಗುಂಟೆ ಘೋಷಿತ ಕೊಳಚೆ ಪ್ರದೇಶದ ಜಮೀನಿನಲ್ಲಿ ಯಾವುದೇ ಒತ್ತುವರಿಯಾಗಿರುವುದಿಲ್ಲ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| ಆ) | ಬಂದಿದ್ದಲ್ಲಿ ಸರ್ಕಾರ ಅಲ್ಲಿ ವಾಸಿಸುತ್ತಿದ್ದ ವಸತಿ ಹೀನರಿಗೆ ಉಳಿದ ಜಾಗವನ್ನು ಮಂಜೂರು ಮಾಡಲು ಕ್ರಮ ಕೈಗೊಂಡಿದೆಯೇ ; | ಪ್ರಸ್ತುತ ಸದರಿ ಘೋಷಿತ ಕೊಳಚೆ ಪ್ರದೇಶದಲ್ಲಿ ಯಾವುದೇ ಕೊಳಗೇರಿ ನಿವಾಸಿಗಳು ವಸತಿ ಹೀನರಾಗಿರುವುದಿಲ್ಲ. |
| ಇ) | ಈ ಜಾಗದಲ್ಲಿ ಅಕ್ರಮವಾಗಿ ಪೆಟ್ರೋಲ್ ಬಂಕ್ ಮತ್ತು ಹೋಟೆಲ್‌ಗಳನ್ನು ನಿರ್ಮಿಸಿ ಕೊಂಡಿರುವವರನ್ನು ತೆರವುಗೊಳಿಸುವ ಪ್ರಸ್ತಾವನೆಯ ಕಡತವು ಕೊಳಚೆ ನಿರ್ಮೂಲನ ಮಂಡಳಿ(ಸ್ಲಂ ಬೋರ್ಡ್)ಯಲ್ಲಿ ಬಹಳ ವರ್ಷಗಳಿಂದಲೂ ವಿಲೇವಾರಿಯಾಗದೇ ಉಳಿದಿದ್ದು, ವಿಲೇವಾರಿ ಮಾಡಿ ಅಲ್ಲಿ ವಾಸಿಸುತ್ತಿದ್ದ ವಸತಿ ಹೀನರಿಗೆ ಸರ್ಕಾರ ವಸತಿಯನ್ನು ಒದಗಿಸಲು ಕ್ರಮ ಕೈಗೊಳ್ಳುವುದೇ ? | ಬೆಂಗಳೂರು ನಗರ ಜಿಲ್ಲೆಯ ಯಡಿಯೂರು ಗ್ರಾಮದ ಸರ್ವೆ ನಂ.53/3 ರಲ್ಲಿನ 0-33 ½ ಎಕರೆ/ಗುಂಟೆ ಜಮೀನಿನಲ್ಲಿರುವ ಶಾಸ್ತ್ರೀನಗರ ಪ್ರಸ್ತಾಪಿತ ಘೋಷಿತ ಕೊಳಚೆ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಪೆಟ್ರೋಲ್ ಬಂಕ್ ಮತ್ತು ಹೋಟೆಲ್ ಗಳು ಇರುವುದಿಲ್ಲ.<br><br>ಸದರಿ ಪೆಟ್ರೋಲ್ ಬಂಕ್ ಮತ್ತು ಹೋಟೆಲ್‌ಗಳನ್ನು ತೆರವುಗೊಳಿಸುವ ಪ್ರಸ್ತಾವನೆಯ ಕಡತವು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ವಿಲೇವಾರಿಗೆ ಬಾಕಿ ಇರುವುದಿಲ್ಲ. |

ಸಂಖ್ಯೆ :ವಇ 69 ಎಸ್‌ಬಿಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು